# ಒಂದು ನೂತನ ವಿಚಾರದ ಕಥೆ

ಅಪೊಸ್ತಲರ ಕೃತ್ಯದಲ್ಲಿ ಒಂದು ವ್ಯತ್ಯಾಸವುಳ್ಳ ಹಾಗೂ ಆನಂದದಾಯಕವಾದ ಶುದ್ಧ ಗಾಳಿಯಿಂದ ನಾವು ಉಸಿರಾಡಬಹುದು. ಹಿಂದೆ ಪ್ರಚಲಿತವಾದಂಥ ಘಟನೆಗಳ ಅನುಭವವನ್ನೇ ಜನರು ಅನುಭವಿಸುತ್ತಿದ್ದರು. ಆ ಪುಸ್ತಕವು ಮುಂದುವರಿಯುವಾಗ, ದೇವರ ಸಂಬಂಧಕ್ಕೆ ಉಂಟಾದ ನೂತನ ಮಾರ್ಗವನ್ನು ಅದರ ಇತಿಹಾಸದಲ್ಲಿ ನೀಡಲಾಗಿದೆ.

ಇದ್ದಕ್ಕಿದ್ದ ಹಾಗೆ, ಧಾರ್ಮಿಕ ವಿಚಾರಗಳಲ್ಲಿ ವ್ಯತ್ಯಾಸಗಳು ನಿರ್ಮಿತವಾದವು ಕ್ರಿಸ್ತ ಯೇಸುವಿನಲ್ಲಿ ನಂಬಿಕೆ ಇಟ್ಟವರ ಜೀವಿತದಲ್ಲಿ ಅನೇಕ ಬದಲಾವಣೆಗಳು ಉಂಟಾದವು. ಈ ಎಲ್ಲಾ ಪರಿಣಾಮಗಳಿಗೆ ಕಾರಣವೇನು?

ಅಪೊಸ್ತಲರೆಲ್ಲರೂ ಸರಿಸಾಟಿಯಿಲ್ಲದ ವ್ಯಕ್ತಿಗಳಾಗಿದ್ದರು. ಅವರ ಆತ್ಮ ಮನೋಭಾವವು ಹಾಗೂ ಹೃದಯಗಳಲ್ಲಿ ಗಮನಾರ್ಹವಾದ ವ್ಯತ್ಯಾಸಗಳಿದ್ದವು. ಈ ಹಿಂದೆ ಅವರಲ್ಲಿ ಬೇಸರ, ಗೊಂದಲ, ನಿರಾಶೆ, ಕಸಿವಿಸಿ, ಮತ್ತು ನಿರೀಕ್ಷೆ ಇಲ್ಲದವರಾಗಿದ್ದರು. ಅಪೊಸ್ತಲರ ಕುರಿತು ಅಪೊಸ್ತಲರ ಕೃತ್ಯಗಳು ಪುಸ್ತಕವು ಅವರು ಚೈತನ್ಯ ಉಳ್ಳವರು, ತೀಕ್ಷ್ಣಬುದ್ಧಿವುಳ್ಳವರು, ಧೈರ್ಯವಂತರೂ ದೃಢಕಾಯರೂ, ಒರಟಾದವರಾಗಿ, ಪರಲೋಕಕ್ಕೆ ಏರಿ ಹೋದವನ ಕರೆಗೆ ನಂಬಿಗಸ್ತರಾಗಿದ್ದರು. ಅವರು ಎಲ್ಲರಿಗೂ ಈ ಕಥೆಯನ್ನು ಹೇಳಿ, ಸುವಾರ್ತೆ ಸಾರಲು ಸಿದ್ಧರಾಗಿದ್ದರು. ಅವರ ಧೈರ್ಯ ಹಾಗೂ ದೃಢ ನಿರ್ಧಾರವನ್ನು ಕಂಡು, ಯೆಹೂದ್ಯರು, ಸದ್ದುಕಾಯರು, ಯಾಜಕರು, ಹಾಗೂ ಹಿರೀ ಸಭೆಯವರು ಭಯಭ್ರಾಂತರಾದರು. ಮುಂದೆ ಮಹಾಸಂಕಟವನ್ನು ಎದುರಿಸುವವರಿದ್ದರು, ಹಾಗೂ ಮರಣಕ್ಕೂ ಸೆರೆವಾಸಕ್ಕೂ ಸಿದ್ಧರಾಗಿದ್ದರು.

ಈ ಹಿಂದೆ ಆ ಶಿಷ್ಯರುಗಳು, ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯರಾಗಿದ್ದರು, ಆದರೆ ಈಗ ಅವರು ಹೊಸ ಒಡಂಬಡಿಕೆಗೆ ವಿಧೇಯರಾಗಿದ್ದರು. ಅವರ ಆರಾಧನೆಯು ಆತ್ಮ ಮತ್ತು ಸತ್ಯದಿಂದ ಕೂಡಿದ್ದಾಗಿತ್ತು, ಹೃದಯಪೂರ್ವಕವಾದ ಆತ್ಮೀಯ ಸೇವೆಯನ್ನು ಮಾಡಿದರು, ಅವರ ಬೋಧನೆಗೆ ಯೇಸುವೇ ಮೂಲವಾಗಿದ್ದನು. "ಅವರು ಮರಣ ಹೊಂದುವದಕ್ಕೂ ಸಿದ್ಧರಾಗಿದ್ದರು" ಅದರಲ್ಲಿ ಕುಟುಂಬದ ಅನ್ಯೋನ್ಯತೆಯು ಉಂಟಾಯಿತು. ಅವರಲ್ಲಿ ವಿಶೇಷ ಬದಲಾವಣೆಯಾಯಿತು.

ಆ ಶಿಷ್ಯರಿಗೆ ನೂತನ ಶಕ್ತಿಯನ್ನು ಹಾಗೂ ಚೈತನ್ಯವನ್ನು ನೀಡುವ ಆತ್ಮೀಯ ಶಕ್ತಿಯು ಎಂಥದ್ದಾಗಿತ್ತು? ಅಪೊಸ್ತಲರ ಮೂಲಕ ಹೊಸದಾದ ಚಿತ್ತ ಅಥವಾ ಒಡಂಬಡಿಕೆಯು ಪ್ರಕಟಗೊಂಡಿದ್ದವು, ಅದು ಯೇಸುವಿನ ಶಿಲುಬೆಯ ಮರಣದ ಪರಿಣಾಮವಾಗಿತ್ತು.

## ಅವರ ಪ್ರಸಂಗವು ಹೊಸದಾಗಿತ್ತು

ಶಿಷ್ಯರುಗಳು ಯೇಸುವನ್ನೆ ಕರ್ತನೆಂದು ಹೇಳಿ ಪ್ರಸಂಗವನ್ನು ಆರಂಭಿಸಿದ್ದರು. ದೇವರು, ಯೇಸುವನ್ನೆ ಕ್ರಿಸ್ತನೆಂದು ಮಾಡಿರುವನು ಎಂಬುದಾಗಿ ಪೇತ್ರನು ಪ್ರಚಾರ ಮಾಡಿದ್ದನು (ಅಪೊಸ್ತರ ಕೃತ್ಯಗಳ 2:36). ದೇವದೂತನು, ಯೋಸೇಫನಿಗೆ ಕಾಣಿಸಿಕೊಂಡು, ಕ್ರಿಸ್ತನೆಂದು ಹೆಸರಿಸದೆ ಮಗುವಿಗೆ "ಯೇಸು" ಎಂದು ಹೆಸರಿಡಬೇಕೆಂದು ಹೇಳಿದನು (ಮತ್ತಾಯ 1:21). ಯೇಸುವಿನ ಕೆಲಸದ ನಿಮಿತ್ತ, ಆತನಿಗೆ "ಕ್ರಿಸ್ತ" ನೆಂದು ಹೆಸರಿಡಲಾಗಿತ್ತು (ಫಿಲಿಪ್ಪಿ 2:9-11). "ಅಭಿಷೇಕ" ಎಂಬದು ಆ ಹೆಸರಿನ ಅರ್ಥ, ಅರಸನಾಗುವದಕ್ಕೆ ಅಭಿಷೇಕ ಅದು ಹಳೇ ಒಡಂಬಡಿಕೆ "ಮೆಸ್ಸೀಯ" ಎಂಬ ಹೆಸರಿನ ಅರ್ಥವನ್ನು ನೀಡುತ್ತದೆ. ಯೇಸು ಕ್ರಿಸ್ತನು ತಂದೆಯ ಬಲಪಾರ್ಶ್ವದಲ್ಲಿ ಆಸೀನನಾಗಿದ್ದರಿಂದ, ಆತನೇ ಕ್ರಿಸ್ತನು ಹಾಗೂ ಅಭಿಷೇಕ

ಹೊಂದಿದ್ದ ಅರಸನು ಎಂದು ಶಿಷ್ಯರು ಪ್ರಕಟಿಸಿದ್ದರು.

"ಪ್ರಭು" ಎಂದರೆ "ಯಜಮಾನ" ಆದ್ದರಿಂದ ಯೇಸು ಸರ್ವಾಧಿಕಾರಿಯೂ ಹೌದು. ಪರಲೋಕ ಹಾಗೂ ಭೂಲೋಕದಲ್ಲಿ ಎಲ್ಲಾ ಅಧಿಕಾರವನ್ನು ನನಗೆ ನೀಡಲಾಗಿದೆ ಎಂದು ಯೇಸು ಪ್ರಕಟಮಾಡಿದ್ದನು, ಅದರಲ್ಲಿ ಆತನ ಮರಣ ಪುನರುತ್ಥಾನದ ಅಧಿಕಾರವೂ ಒಳಗೊಂಡಿತ್ತು (ಮತ್ತಾಯ 28:18), ಮತ್ತು ಪೇತ್ರನು ತನ್ನ ಪ್ರಥಮ ಸಂದೇಶದಲ್ಲಿ, ಪರಲೋಕದ ದೇವರು ಯೇಸುವನ್ನು ಕರ್ತನನ್ನಾಗಿಯೂ, ಮತ್ತು ಕ್ರಿಸ್ತನನ್ನಾಗಿಯೂ ಮಾಡಿದನು ಎಂದು ಪ್ರಕಟಿಸಿದನು. (ಅಪೊಸ್ತಲರ ಕೃತ್ಯಗಳು 2:32-36). ಈ ವಿಚಾರವನ್ನು ಹೊಸ ಕ್ರೈಸ್ತರು ಬುದ್ಧಿವಂತಿಕೆಯಿಂದಲೂ ಆಸಕ್ತಿಯಿಂದಲೂ ಸಾರಿದರು, ಯಾಕಂದರೆ ಮೂಲ ಪಿತೃಗಳಾದ ಅಬ್ರಹಾಮನ ಮೂಲಕ ದೇವರು ಯೆಹೂದ್ಯರಿಗೆ ಮಾಡಿದ ವಾಗ್ದಾನವನ್ನು, ಈ ಯೇಸು ಕ್ರಿಸ್ತನು ನೆರವೇರಿಸಿದ್ದನು.

ಅಪೊಸ್ತಲರ ಕೃತ್ಯದಲ್ಲಿ ಪ್ರಕಟಿತವಾಗಿರುವ ಪ್ರಮುಖ ಹೇಳಿಕೆಗಳು ಹಾಗೂ ಗಮನಾರ್ಹ ವಾದ ಅಂಶಗಳು ಇದನ್ನು ರುಜುವಾತುಪಡಿಸಿವೆ. ಕ್ರಿಸ್ತನ ಕುರಿತಾದ ಪ್ರವಾದನೆಗಳು ಯೇಸುವಿನಲ್ಲಿ ನೆರವೇರಿದವು ಎಂದು ಪೇತ್ರನು ತಿಳಿಸಿರುವನು (ಅಪೊಸ್ತಲರ ಕೃತ್ಯಗಳು 3:18). ಅವನು, ಯೇಸುವಿನ ಕುರಿತು "ಬೇಡವೆಂದು ಬಿಟ್ಟ ಕಲ್ಲೇ, ಮೂಲೆಕಲ್ಲಾಯಿತು" ಎಂದಿರುವನು (ಅಪೊಸ್ತಲರ ಕೃತ್ಯಗಳು 4:11). "ಬೇರೆ ಯಾವ ಹೆಸರಿನಲ್ಲೂ ರಕ್ಷಣೆ ಇಲ್ಲ ವೆಂದು" ದೃಢವಾಗಿ ಹೇಳಿದನು (ಅಪೊಸ್ತಲರ ಕೃತ್ಯಗಳು 4:12). ನಂತರ, ಹಿರಿ ಸಭೆಯ ಮುಂದೆ, ಯೇಸು ದೇವರ ಬಲಪಾರ್ಶ್ವದಲ್ಲಿರುವನು (ಆಡಳಿತ ಮಾಡುವ ಅರಸನಿಗೆ ಇರುವ ಸ್ಥಾನ) ಮತ್ತು ಆತನು "ರಕ್ಷಕನೂ, ಕುಮಾರನೂ" ಆಗಿರುವನೆಂದು ತಿಳಿಸಿದನು (ಅಪೊಸ್ತಲರ ಕೃತ್ಯಗಳು 5:31). ಹಾಗೂ ಈ ಯೆಹೂದ್ಯರನ್ನೂ ಮುಖ್ಯ ನಾಯಕರನ್ನು ಉದ್ದೇಶಿಸಿ, ಇಸ್ರಾಯೇಲ್ ಜನರಿಗೆ ಯೇಸುವಿನ ಮೂಲಕ ಪಾಪಪರಿಹಾರವನ್ನು ನೀಡುವನು ಎಂದು ಪ್ರಕಟಿಸಿದನು (ಅಪೊಸ್ತಲರ ಕೃತ್ಯಗಳು 5:31)!

ಸ್ತೆಫನನು ಯೇಸುವನ್ನು ಕುರಿತು, "ನೀತಿವಂತನು" ಎಂದನು. ಮತ್ತು ಈ ವಿಧವಾಗಿ ಅರ್ಥ ಮಾಡಿಕೊಳ್ಳುವ ಜನರಿಗೆ, ಆತನೇ ಮೆಸ್ಸಿಯನೆಂದು ತಿಳಿಸಿದನು (ಅಪೊಸ್ತಲರ ಕೃತ್ಯಗಳು 7:52). ಫಿಲಿಪ್ಪನು ಐಥಿಯೋಪಿಯಕ್ಕೆ ಹೋದಾಗ, ಯೆಶಾಯ ಪ್ರವಾದನೆಯಂತೆ ಯೇಸು ಉಣ್ಣೆ ಕತ್ತರಿಸುವವನ ಮುಂದೆ ಇರುವ ಕುರಿ ಹಾಗೂ ಯಜ್ಞದ ಕರಿಯಾದಾತನು ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 8:30-35). ಇಸ್ರಾಯೇಲ್ಯರ ಮೂಲ ಪಿತೃಗಳಿಗೆ ಉಂಟಾದ ಮೆಸ್ಸೀಯನ ಪ್ರವಾದನೆಯನ್ನು ದೇವರು ನೆರವೇರಿಸಿದನು ಎಂದು ಪೌಲನೂ ಸಹ ತಿಳಿಸಿರುವನು (ಅಪೊಸ್ತಲರ ಕೃತ್ಯಗಳು 13:32, 33). ನಂತರದಲ್ಲಿ ದಾವೀದನ ಅಂಕುರದವನು ಮೆಸ್ಸೀಯನ ಸಿಂಹಾಸನವನ್ನೇರುವನು ಎಂಬ ವಾಗ್ದಾನವನ್ನು ನೆನಪು ಮಾಡಿದನು. ಆ ವಾಗ್ದಾನವು ಯೇಸುವಿನ ಮರಣದಲ್ಲಿ ನಾಶವಾಗದಂತೆ, ದೇವರು ಆತನನ್ನು ಮರಣದಿಂದ ಎಬ್ಬಿಸಿದನು (ಅಪೊಸ್ತಲರ ಕೃತ್ಯಗಳು 13:33-39). ಯೇಸುವಿನಲ್ಲಿ ಇದು ನೀತಿ ನಿರ್ಣಯವೆಂದು ಪೌಲನು ಅಂತ್ಯಗೊಳಿಸಿದನು. ಆದ್ದರಿಂದ ಯಾವ ಯೆಹೂದ್ಯನು ಸಹ ಧರ್ಮಶಾಸ್ತ್ರದಿಂದ ನೀತಿವಂತನಾಗಲು ಅಸಾಧ್ಯ ಎಂದು ಘೋಷಿಸಿದನು (ವಚನ 39).

ತರುವಾಯ, ಅಪೊಸ್ತಲರ ಕೃತ್ಯದಲ್ಲಿ, ಅಧ್ಯಾಯ 2ರಂತೆ, ಇಪ್ಪತ್ತು ವರ್ಷಗಳ ನಂತರ, ಸುನ್ನತಿಯ ಕುರಿತ ಸಮಸ್ಯೆಯನ್ನು ಚರ್ಚಿಸಲು ಮೊದಲು ಯೆರೂಸಲೇಮಿನಲ್ಲಿ ಸಭೆಯಾಗಿ ಕೂಡಿ ಬಂದಿದ್ದರು (ಅಪೊಸ್ತಲರ ಕೃತ್ಯಗಳು 15). ಯೆಹೂದ್ಯ ಹಿನ್ನೆಲೆಯಿಂದ ಬಂದ ಕ್ರೈಸ್ತರು ಧರ್ಮಶಾಸ್ತ್ರದ ಆಚರಣೆಗೆ ಒಳಪಡಿಸಿಕೊಂಡಿದ್ದರು, ಅದರಲ್ಲಿ ಸುನ್ನತಿಯು ಪ್ರಮುಖ ಅಂಶವಾಗಿತ್ತು. ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ ಅನ್ಯರಲ್ಲಿ ದೊಡ್ಡವರು ಮತ್ತು ಯುವಕರು ಸುನ್ನತಿಗೆ ಒಳಗಾಗ ಬೇಕೆಂದು ನಿರ್ಣಯಿಸಿದ್ದರು. ಪೌಲ ಬಾರ್ನಬರು ತಮ್ಮ ಪ್ರಥಮ ಸೇವಾ ಪ್ರಯಾಣವನ್ನು ಅಂತ್ಯಗೊಳಿಸುವಾಗ (ಅಪೊಸ್ತಲರ ಕೃತ್ಯಗಳು 13; 14); ಮತ್ತು

ಸಿರಿಯದ ಅಂತಿಯೋಕ್ಯದಲ್ಲಿ ವರದಿಯನ್ನು ಸಲ್ಲಿಸುವಾಗ ಸುನ್ನತಿ ಎಂದು ಹೇಳುವವರನ್ನು ಎದುರಿಸಬೇಕಾಯಿತು. ಅವರು ಸುಮಾರು ಮೂರು ವರ್ಷಗಳಿಂದ ಅನ್ಯರಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದರು, ಆ ಸಮಯದಲ್ಲಿ ಸುನ್ನತಿಯು ಅನಗತ್ಯ ವೆಂದು ಹೇಳಿದ್ದರು, ಆದರೆ ಅದಕ್ಕೆ ಸಮ್ಮತ್ತ ಪಡದ ಕೆಲವು ಸಹೋದರರು ಇದರ ಕುರಿತ ಪ್ರಶ್ನೆಗಳನ್ನು ಹೊಂದಿದ್ದರು. ಯೇಸುವಿನ ಸಹೋದರನಾದ ಯಾಕೋಬನು ಸುನ್ನತಿ ಕುರಿತ ಸಮಸ್ಯೆಯನ್ನು ಚರ್ಚಿಸುವ ಸಭೆಯ ಅಧ್ಯಕ್ಷನಾಗಿದ್ದನು (ಅಪೊಸ್ತಲರ ಕೃತ್ಯಗಳು 15:13-21). ಅಮೋಸನ ಪ್ರವಾ ದನೆಯಂತೆ "ದಾವೀದನ ಗುಡಿಸಲು" ಎಂಬ ವಿಚಾರವು ನೆರವೇರಿದೆ. ಆದದರಿಂದ ಅನ್ಯರು ಕ್ರಿಸ್ತನ ಬಳಿಗೆ ಬರುವಾಗ, ಅವರಿಗೆ ಯಾವುದೇ ವಿಧವಾದ ನಿಯಮಾನವಳಿಗನ್ನು ಹೊರಿಸಲಿಲ್ಲ. ಈ ವಾಗ್ದಾನದ ಪ್ರಕಾರ ಸತ್ಯ ಆರಾಧಕನು ಮೆಸ್ಸೀಯನ ಆಡಳಿತದಲ್ಲಿ ಆತ್ಮೀಕವಾಗಿ ದಾವೀದನ ಮಗನಾಗುವನು, ಹಾಗೂ ವಾಗ್ದಾನದ ಮೆಸ್ಸಿಯನು ದಾವೀದನ ಸಿಂಹಾಸನ ಸೀನನಾಗಿರುವನು. ಈ ಪ್ರವಾದನೆಯು ನೆರವೇರುವದರಿಂದ, ಅನ್ಯರು ಯಾವುದೇ ಧರ್ಮಶಾಸ್ತ್ರವನ್ನು ಅನುಸರಿಸುವ ಪ್ರಮೇಯವಿರುವದಿಲ್ಲ. ಸುನ್ನತಿ ಎಂಬ ಅಂಶಕ್ಕೆ ಇದರಲ್ಲಿ ಉತ್ತರವಿದೆ: ಕ್ರಿಸ್ತನ ಅಧಿಕಾರದಲ್ಲಿ ಇದು ಅನಗತ್ಯವಾಗಿದೆ ಎಂದು ಹೇಳಿದನು.

ಈ ಬೋಧನೆಯು ಯೆಹೂದ್ಯರಿಗೆ ಹೊಸದಾಗಿತ್ತು, ಯಾಕೆಂದರೆ, ಅವರ ಮೂಲಪಿತೃಗಳು ಹದಿನೈದು ನೂರು ವರ್ಷಗಳ ಕಾಲ ಅ ಧರ್ಮಶಾಸ್ತ್ರಕ್ಕೆ ಒಳಗಾಗಿದ್ದರು. ಅಪೊಸ್ತಲರ ಕೃತ್ಯದ ನಂತರದ ಅಧ್ಯಾಯಗಳಲ್ಲಿ ಸಭೆಯಲ್ಲಿದ್ದ ಅನೇಕ ಯೆಹೂದ್ಯರಲ್ಲಿ ಈ ಕುರಿತು ಗೊಂದಲವುಂಟಾಯಿತು.

## ಅವರ ಆರಾಧನೆಯಲ್ಲಿ ವ್ಯತ್ಯಾಸವಿತ್ತು

ಕ್ರಿಸ್ತನ ಅಧಿಕಾರದಲ್ಲಿ, ಸುನ್ನತಿಯು ಅನಗತ್ಯವಾಗಿತ್ತು. ಕ್ರೈಸ್ತರಾದ ಯೆಹೂದ್ಯರು ಪಸ್ಕ ಹಬ್ಬವನ್ನು ಪಂಚಾಶತ್ತಮ ಹಬ್ಬವನ್ನು ವರ್ಣಶಾಲೆಗಳ ಹಬ್ಬಗಳನ್ನು ಆಚರಿಸುತ್ತಿರಲಿಲ್ಲ. ಅವರು ಪ್ರಾಣಿಯಜ್ಞವನ್ನು ಧಾನ್ಯ ಹಾಗೂ ಇತರೆ ಯಜ್ಞಗಳನ್ನು ನಿಲ್ಲಿಸಿಬಿಟ್ಟರು. ಅವರು ಲೇವಿಯ ಯಾಜಕರ ಬಳಿಗೆ ಇನ್ನೆಂದಿಗೂ ಹೋಗಲಿಲ್ಲ. ಅವರು ದಶಮಾಂಶದ ಆಚರಣೆಯನ್ನು ನಿಲ್ಲಿಸಿಬಿಟ್ಟರು. ಅವರು ಈ ಎಲ್ಲಾ ಆಚರಣೆಗಳನ್ನು ನಿಲ್ಲಿಸಿ ಬಿಟ್ಟಿದ್ದರಿಂದ, ಕ್ರಿಸ್ತನ ನಿಯಮದ ಅಡಿಯಲ್ಲಿ ಏನು ಮಾಡಿದರು?

ಲೂಕನು ಅದನ್ನು ಸರಳವಾಗಿ ತಿಳಿಸಿ: "ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42). ಈಗ ಅವರು ಸತ್ಯಗಳಿಗಾಗಿ ಅಪೊಸ್ತಲರನ್ನು ದ್ವೇಷಿಸಿದರೇ ವಿನಃ, ಧರ್ಮಶಾಸ್ತ್ರದ ಕಡೆಗೆ ನೋಡಲಿಲ್ಲ. ಅವರು ಪಸ್ಕದ ಊಟದ ಬದಲು, ಕರ್ತನ ಭೋಜನವನ್ನು ಮಾಡಿದರು, ಮತ್ತು ದಶಮಾಂಶದ ವಿಚಾರಕ್ಕೆ ಒಳಪಡಲಿಲ್ಲ. ಅಗತ್ಯಗಳು ಇರುವಾಗ, ಅವರ ಐಶ್ವರ್ಯಕ್ಕೆ ತಕ್ಕ ಹಾಗೆ ನೀಡಿದರು[1] ಅವರು ಯೇಸು ಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥಿಸಿದರು.

ಈ ಎಲ್ಲಾ ಸಂಗತಿಗಳ ಬದಲಾವಣೆಗಳು ಅವರ ಆರಾಧನೆಯಲ್ಲಿದ್ದವು. ಎಚ್ಚರದಿಂದ ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಓದುವವನು ಈ ವ್ಯತ್ಯಾಸಗಳನ್ನು ಕಂಡುಹಿಡಿಯುವನು: ಅವರು ಅಪೊಸ್ತಲರ ಬೋಧನೆಗನುಗುಣವಾಗಿ ಮಾನಸಾಂತರ ಪಟ್ಟರು, ಪಾಪಕ್ಷಮೆಗಾಗಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಮತ್ತು ದೇವರ ಅನ್ಯೋನ್ಯತೆಗೆ ಸೇರಿಕೊಂಡರು (ಅಪೊಸ್ತಲರ ಕೃತ್ಯಗಳು 2:37-41) ಆದುದರಿಂದ, ಆ ಹನ್ನೆರಡು ಜನರಿಗೆ ಯೇಸು ನೀಡಿದ ಮಾರ್ಗದರ್ಶನದಂತೆ ಆರಾಧಿಸಿದರು.

ಪ್ರಮುಖವಾಗಿ ಅಪೊಸ್ತಲರ ಕೃತ್ಯದ ಆರಾಧನೆಯಲ್ಲಿ ವಾದ್ಯಗಳನ್ನು ನುಡಿಸುವ ವಿಚಾರನ್ನು ತಿಳಿಸಿರುವದಿಲ್ಲ. ಈ ಹಿಂದೆ, ಧರ್ಮಶಾಸ್ತ್ರದ ಪ್ರಕಾರ, ಈ ಜನರು ಆರಾಧನೆಯಲ್ಲಿ

ವಾದ್ಯಗಳನ್ನು ಬಳಸುತ್ತಿದರು. ಹೇಗೂ ಆದಿ ಸಭೆಯ ಆರಂಭದಲ್ಲಿ, ಹೊಸ ಒಡಂಬಡಿಕೆಯ ಪ್ರಕಾರ ಸಭೆಗಳವರು ವಾದ್ಯರಹಿತ ಸಂಗೀತಗಳನ್ನು ಮಾತ್ರ ಹಾಡುತ್ತಿದ್ದರು. ಇನ್ನೊಬ್ಬರನ್ನು ಎಚ್ಚರಿಸಲೂ ಹಾಗೂ ಬೋಧಿಸಲು ಸಂಗೀತವನ್ನು ಬಳಸುತ್ತಿದ್ದರು, "ಆದರೆ ಪವಿತ್ರಾತ್ಮ ಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ಇರಬೇಕಷ್ಟೆ" (ಎಫೆಸ 5:19; ಕೊಲೊಸ್ಸೆ 3:16). ಕ್ರಿಸ್ತನನ್ನು ಸ್ವೀಕರಿಸಿದವರಲ್ಲಿ ಈ ಒಂದು ವಿಶೇಷ ಬದಲಾವಣೆಯನ್ನೂ ಸಹ ಕಾಣುತ್ತೇವೆ. ಪರಿವರ್ತನೆಗೊಂಡ ಪ್ರತಿ ಯೆಹೂದ್ಯನು ಯೇಸುವಿನಲ್ಲೂ ಹಾಗೂ ಅಪೊಸ್ತಲರಲ್ಲೂ, ತೋರಲಾದ ದೇವರ ಚಿತ್ತವನ್ನು ಕಂಡುಕೊಂಡರು. ಇದು ವಿಶೇಷ ಬದಲಾವಣೆಯ ಹಾಗೂ ಆನಂದದಾಯಕವಾದ ಸಮಯವಾಯಿತು.

## ಅವರು ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿದ್ದರು

ಯೆಹೂದ್ಯರು ಧರ್ಮಶಾಸ್ತ್ರದ ಮೂಲಕ ಪಾಪ ಪರಿಹಾರದ ನಿರ್ಣಯವನ್ನು ಹೊಂದಲು ಸಾಧ್ಯವಾಗಲಿಲ್ಲ, ಅದು ತಾತ್ಕಾಲಿಕವಾದ ಹಾಗೆ ಇಲ್ಲದೆ ಹೋಗುವಂಥದ್ದಾಗಿತ್ತು (ಯೆರೆಮಿಾಯ 31:31, 32). ಕ್ರಿಸ್ತನು ಮಹಾ ಯಾಜಕನು ಮತ್ತು ಅರಸನಾದಾಗ ಆ ಧರ್ಮಶಾಸ್ತ್ರದ ವಾಗ್ದಾನವು ಆತನಲ್ಲಿ ನೆರವೇರಿತು (ಇಬ್ರಿಯ 8:1-13). ಆ ನಿಯಮವು ಯೆಹೂದ್ಯರಿಗಾಗಿ ನಿರ್ಮಿತಗೊಂಡು ಕೇವಲ ಇಸ್ರಾಯೇಲ್ ಜನಾಂಗದವರಿಗೆ ಮಾತ್ರ ಮೀಸಲಾಗಿತ್ತು (ವಿಮೋಚನಕಾಂಡ 34:27, 28); ಅದನ್ನು ಸಾರ್ವತ್ರಿಕ ಧರ್ಮಶಾಸ್ತ್ರವನ್ನಾಗಿ ನಿರ್ಮಿಸಿರಲಿಲ್ಲ.

ಯೇಸುವಿನ ಆಗಮನದ ಸಮಯದವರೆಗೆ (ಗಲಾತ್ಯ 3:19) ಇಸ್ರಾಯೇಲ್ಯರಿಗಾಗಿ ಆ ಧರ್ಮಶಾಸ್ತ್ರವನ್ನು ನೀಡಲಾಗಿತ್ತು (ಗಲಾತ್ಯ 3:24). "ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ" (ಗಲಾತ್ಯ 3:24, 25). ಹಳೆ ಒಡಂಬಡಿಕೆಯ ಮೂಲಕವಾಗಿ ದೇವರು ರಕ್ಷಣೆಯ ಒಂದು ಭಾಗವನ್ನು ಅಬ್ರಹಾಮನಿಗೆ ನೀಡದೆ, ತನ್ನ ಜನರನ್ನು ರಕ್ಷಿಸುವ ಸಲುವಾಗಿ ನೀಡಿರುವನು (ಗಲಾತ್ಯ 3:21, 22). ಹಾಗೂ, ಹೋತ ಹೋರಿಗಳ ರಕ್ತದ ಮೂಲಕ ಪಾಪಪರಿಹಾರವಾಗುವದು ಅಸಾಧ್ಯವಾಯಿತು (ಇಬ್ರಿಯ 10:4).

ಯೇಸು ಕ್ರಿಸ್ತನು ಈ ಧರ್ಮಶಾಸ್ತ್ರವನ್ನು ಈಡೇರಿಸಿರುವನು (ಲೂಕ 24:44, 45), ಅದನ್ನು ತನ್ನ ಮರಣದಲ್ಲಿ ಇಲ್ಲದಂತಾಗಿ ಮಾಡಿರುವನು (ಎಫೆಸ 2:15), ಆತನ ಶಿಲುಬೆಯ ಮೂಲಕ ದೂರ ಮಾಡಿರುವನು (ಕೊಲೊಸ್ಸೆ 2:14), ಮತ್ತು "ಹಳೆಯದಾಗಿ" ಅಥವಾ "ಸಮಯಬಾಧ್ಯವಾಗಿ" ಮಾಡಿದನು (ಇಬ್ರಿಯ 8:13). ಯೇಸು ಕ್ರಿಸ್ತನ ಶಿಲುಬೆಯ ಮರಣದ ಮೂಲಕ ಯೆಹೂದ್ಯರು ಈ ನಿಯಮಗಳಿಂದ ದೂರ ಅಥವಾ ಅದಕ್ಕೆ ಸತ್ತವರಾಗಿದ್ದಾರೆ. ಯೆಹೂದ್ಯರು ಕ್ರಿಸ್ತನಲ್ಲಿ ಆತ್ಮೀಕವಾಗಿ ಸೇರಿಕೊಳ್ಳುವ ಸಲುವಾಗಿ, ಇದನ್ನು ಸಾಧಿಸಲಾಗಿದೆ (ರೋಮಾಪುರ 7:4).

## ಮುಕ್ತಾಯ

ಅಪೊಸ್ತಲರ ಕೃತ್ಯದಲ್ಲಿ, ಆತ್ಮೀಕ ವಾಗ್ದಾನಗಳ ಹಾಗೂ ಪಾಪದ ಪರಿಹಾರದ ಕಾರ್ಯಗಳ ಈಡೇರಿಕೆಯ ವಿಚಾರವನ್ನು ತಿಳಿಸಲಾಗಿದೆ. ಕ್ರೈಸ್ತರಲ್ಲಿ, ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿದೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ (1 ಕೊರಿಂಥ 10:11). ಯೇಸುವನ್ನು ಹಿಂಬಾಲಿಸುವವರಿಗೆ ಈ ಆಶೀರ್ವಾದಗಳು ಸುರಿಸಲ್ಪಡುತ್ತವೆ.

ಯೇಸು ಕ್ರಿಸ್ತನ ರಕ್ತದ ಮೂಲಕ, ದೇವರ ಅನ್ಯೋನ್ಯತೆಗೆ "ಪ್ರತಿಷ್ಟಿಸಿದ ಜೀವವುಳ್ಳ ಮಾರ್ಗ" ಉಂಟಾಗಿದೆ (ಇಬ್ರಿಯ 10:19, 20). ಹೊಸದಾದ ಹಾಗೂ ಮಹತ್ವದ ಯಾಜಕನನ್ನು ದೇವರ ಮನೆಯ ಮೇಲೆ ನೇಮಿಸಲಾಗಿದೆ: ಆತನೆ ಯೇಸು ಕ್ರಿಸ್ತನು (ಇಬ್ರಿಯ

10:21). ಈ ಹೊಸ ಒಡಂಬಡಿಕೆಯ ಮುಖಾಂತರ ಪ್ರತಿ ಕ್ರೈಸ್ತನು ದೇವ ಸನ್ನಿಧಿಗೆ ಪ್ರವೇಶ ಮಾಡುವ ಅವಕಾಶವಿದೆ (ಇಬ್ರಿಯ 10:19-22). ಪ್ರತಿ ಕ್ರೈಸ್ತನು ಯಾಜಕನಾಗಿ, ದೇವರು ಮೆಚ್ಚುವ ಯಜ್ಞವನ್ನು ಸಮರ್ಪಿಸುವದಕ್ಕೆ ಯೋಗ್ಯನಾಗಿರುವನು (1 ಪೇತ್ರ 2:5, 9).

ಕ್ರಿಸ್ತನ ಹೊಸ ಒಡಂಬಡಿಕೆಯಲ್ಲಿ, ಕ್ಷಮಾಪಣೆ ಹಾಗೂ ಅನ್ಯೋನ್ಯತೆಯು ಇರುತ್ತದೆ. ಆ ಒಡಂಬಡಿಕೆಯಲ್ಲಿ ಸರ್ವರಿಗೂ ಕರುಣೆ ಹಾಗೂ ಕ್ಷಮಾಧಾನವಿದೆ (ಇಬ್ರಿಯ 8:10-12). ಇನ್ನು ಮುಂದೆ ದೇವರು ಪಾಪಗಳನ್ನು ನೆನಪು ಮಾಡದೆ ಇರುವದರಿಂದ; ದೇವರ ಪಾಪಕ್ಷಮೆಯ ಅದ್ಭುತವಲ್ಲವೇ!

ಈ ಮಹಿಮೆಯುಳ್ಳ ಪ್ರಾಯೋಜನೆಯನ್ನು ಅಪೊಸ್ತಲರ ಕೃತ್ಯಗಳು ಎಂಬ ಇತಿಹಾಸದ ಪುಸ್ತಕದಲ್ಲಿ ನೋಡುತ್ತೇವೆ. ಕ್ರಿಸ್ತನ ನೂತನವಾದ ಕಟ್ಟಳೆಯಲ್ಲಿ, ಹೊಸ ಆಶೀರ್ವಾದಗಳು ಇರುತ್ತವೆ, ಈ ಜೀವಮಾನದ ನಂತರ ನಿರೀಕ್ಷೆಯು ಇರುತ್ತದೆ.

---

ಟಿಪ್ಪಣಿ

[1]"ಕ್ರಿಸ್ತನ ಮಹಿಮೆಗಾಗಿ ಹೊಸ ಆರಾಧನೆ" ಎಂಬ ಪಾಠದಲ್ಲಿ "ಸಹವಾಸ" ಎಂಬ ಚರ್ಚೆಯನ್ನು ಮುಂದಿನ ಪುಸ್ತಕದಲ್ಲಿ ನೋಡಿ.